GREENPEACE
# 60, Wellington Street, Richmond Town, Bangalore 560 025

SOIL
Sustainable Organic Initiatives for Livelihood
# 456, 4th Cross, 8th Main, Vijayanagar, Bangalore 560 040

# ಪತ್ರಿಕಾ ಪ್ರಕಟನೆ

## ಪರಿಸರ ಸ್ನೇಹಿ ಸಾವಯುವ ಗೊಬ್ಬರಗಳಿಗೆ ಸಬ್ಸಿಡಿ ನೀಡಲು ಜನಸಂವಾದ ವೇದಿಕೆಯ ಒತ್ತಾಯ

ಚಿತ್ರದುರ್ಗ, ಕರ್ನಾಟಕ: **27.08.2009:** ರೈತರು, ರೈತ ಸಂಘಗಳ ಪ್ರತಿನಿಧಿಗಳು, ಸರ್ಕಾರಿ ಅಧಿಕಾರಿಗಳು, ಕೃಷಿ ವಿಜ್ಞಾನಿಗಳು, ಮಹಿಳಾ ಸ್ವ-ಸಹಾಯ ಸಂಘಗಳನ್ನೊಂಡ ಜನಸಂವಾದ ವೇದಿಕೆಯು ರಾಸಾಯನಿಕ ಗೊಬ್ಬರಗಳಿಗೆ ಕೊಡುತ್ತಿರುವ ಸಬ್ಸಿಡಿಯನ್ನು ಸಾವಯುವ ಗೊಬ್ಬರಗಳಿಗೆ ನೀಡುವ ವ್ಯವಸ್ಥೆಯನ್ನು ಜಾರಿಗೆ ತರುವಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರವನ್ನು ಒತ್ತಾಯಿಸಿತು.

ಗ್ರೀನ್‌ಪೀಸ್ ಇಂಡಿಯಾ ಮತ್ತು ಸಾಯಿಲ್ (**SOIL**) ಸಂಸ್ಥೆ ಜಂಟಿಯಾಗಿ ಗೊಬ್ಬರ ಸಬ್ಸಿಡಿ ನೀತಿ ಕುರಿತು ಸಂಘಟಿಸಿದ್ದ ಜನಸಂವಾದ ಶಿಬಿರದಲ್ಲಿ ಈ ಪ್ರತಿನಿಧಿಗಳು ಭಾಗವಸಿದ್ದರು.

ರಾಸಾಯನಿಕ ಗೊಬ್ಬರಗಳ ಬಳಕೆಯ ಹೊರತಾಗಿಯೂ, ಕೃಷಿ ಉತ್ಪನ್ನ ಕುಂಠಿತವಾಗುತ್ತಿರುವುದರ ಬಗ್ಗೆ, ಕೇಂದ್ರ ಅರ್ಥ ಸಚಿವರು ಕಳೆದ ಬಜೆಟ್ ಭಾಷಣದಲ್ಲಿ ಕಳವಳ ವ್ಯಕ್ತ ಪಡಿಸಿದ್ದರು. ಹಾಗೆಯೇ ರಸಗೊಬ್ಬರ ಸಬ್ಸಿಡಿ ನೀತಿಯ ಸುಧಾರಣೆ ಬಗ್ಗೆ ಪ್ರಸ್ತಾಪಿಸಿದ್ದನ್ನು ಇಲ್ಲಿ ನೆನೆಪಿಸಿಕೊಳ್ಳಬಹುದು.

ಈಗಿರುವಂತೆ ಕೇಂದ್ರ ಸರ್ಕಾರ ಈ ಸಬ್ಸಿಡಿಗಾಗಿ **50** ಸಾವಿರ ಕೋಟಿ ರೂಪಾಯಿಗಳನ್ನು ವ್ಯಯಿಸುತ್ತಿದೆ. ಈಗಿರುವ ಸಬ್ಸಿಡಿಯ ಬದಲು ಪೋಷಕಾಂಶ ಆಧಾರಿತ ಸಬ್ಸಿಡಿ ವ್ಯವಸ್ಥೆಯನ್ನು ಜಾರಿಗೆ ತರುವ ಬಗ್ಗೆ ಕೇಂದ್ರ ಸರ್ಕಾರ ಪ್ರಸ್ತಾಪಿಸಿದೆ, ಆದರೆ ಈ ಸುಧಾರಣಾ ಪ್ರಸ್ತಾವ, ಸಮಸ್ಯೆಯನ್ನು ಬಗೆಹರಿಸುವ ಬಗ್ಗೆ ಈ ಸಭೆಯನ್ನು ಭಾಗವಹಿಸಿದ್ದ ಪ್ರತಿನಿಧಿಗಳು ಸಂಶಯ ವ್ಯಕ್ತಪಡಿಸಿದರು

ಚಿತ್ರದುರ್ಗ ಜಿಲ್ಲಾ ಸಾವಯುವ ಕೃಷಿ ಮಿಶನ್ ಅಧ್ಯಕ್ಷರಾದ ಶ್ರೀ ಭರತೇಶ್ ರೆಡ್ಡಿಯವರು ಈ ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಕೃಷಿ ವಿಜ್ಞಾನಿ ಗಣಪತಿಯವರು ಮಾತನಾಡುತ್ತಾ ರಾಸಾಯನಿಕ ಗೊಬ್ಬರಗಳ ಬಳಕೆಯಿಂದ ಆಗುವ ದುಷ್ಪರಿಣಾಮಗಳ ಬಗ್ಗೆ ತಿಳಿಸಿ, ಸಾವಯುವ ಪದ್ಧತಿಯ ಅಗತ್ಯವನ್ನು ಒತ್ತಿ ಹೇಳಿದರು. ಬಹುಬೆಳೆ ಪದ್ಧತಿ, ಸಾವಯುವ ಗೊಬ್ಬರಗಳ ಬಳಕೆಯನ್ನು ಸರ್ಕಾರ ಪ್ರೋತ್ಸಾಹಿಸಬೇಕು ಎಂದು ಅವರು ನುಡಿದರು.

ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ರೈತ ಸಿದ್ದವೀರಪ್ಪನವರು ರಸಗೊಬ್ಬರಗಳ ಮೇಲಿನ ಸಬ್ಸಿಡಿಯನ್ನು ಹಂತ ಹಂತವಾಗಿ ತೆಗೆದುಹಾಕಬೇಕು ಎಂದು ಸಲಹೆ ನೀಡಿದರು.

ಭರತೇಶ ರೆಡ್ಡಿಯವರು ರಾಸಾಯನಿಕ ಗೊಬ್ಬರಗಳಿಗೆ ಸಬ್ಸಿಡಿ ನೀಡುವುದರ ಬದಲು ಸರ್ಕಾರವು ಪರ್ಯಾಯ ಕೃಷಿ ಪದ್ಧತಿಗೆ ನೇರ ಸಹಾಯವನ್ನು ನೀಡಿ ಪ್ರೋತ್ಸಾಹಿಸಬೇಕೆಂದು ಅಭಿಪ್ರಾಯಪಟ್ಟರು.

ಸಾಯಿಲ್ **(SOIL)** ಸಂಸ್ಥೆಯ ಶ್ರೀನಿವಾಸ್ ಅವರು ಸಾವಯುವ ಪದ್ಧತಿಯ ಮೂಲಕವಷ್ಟೇ ಪುನರುಜ್ಜೀವನಗೊಳಿಸಬಹುದು. ಈ ಪುನರುಜ್ಜೀವನವು ಆಹಾರ ಭದ್ರತೆಯನ್ನು ಸಮರ್ಥವಾಗಿ ಕಾಪಾಡಬಲ್ಲದು ಎಂದು ತಿಳಿಸಿದರು.

ಕಾರ್ಯಕ್ರಮದ ಮೊದಲು ಆಹಾರ ಸಮಸ್ಯೆಯ ಸಬ್ಸಿಡೀಕರಣ ಕುರಿತಾದ ವರದಿಯೊಂದನ್ನು ಗ್ರೀನ್‌ಪೀಸ್ ಸಂಸ್ಥೆಯ ರಾಜೇಶ್ ಕೃಷ್ಣನ್ ಅವರು ಬಿಡುಗಡೆಗೊಳಿಸಿ ಸುಸ್ಥಿರ ಕೃಷಿ ಪದ್ಧತಿ ಅನುಷ್ಠಾನಕ್ಕೆ ಗ್ರೀನ್‌ಪೀಸ್ ದುಡಿಯುತ್ತಿರುವುದನ್ನು ವಿವರಿಸಿದರು.

ಈ ಜನಸಂವಾದ ವೇದಿಕೆಯು ಪರಸ್ನೇಹಿ ಪರ್ಯಾಯ ಒಳಸುರಿಗಳನ್ನು ಸರ್ಕಾರಕ್ಕೆ ಸಲಹೆ ಮಾಡಿತು.

ಸಬ್ಸಿಡಿ ನೀತಿಯ ಕುರಿತಾದ ಈ ರೀತಿಯ ಸಂವಾದ ರಾಷ್ಟ್ರದಲ್ಲೇ ಮೊದಲನೆಯದಾಗಿದ್ದು, ಈ ಸಂವಾದದ ಯಶಸ್ಸಿನ ಹಿನ್ನೆಲೆಯಲ್ಲಿ ಇದೇ ರೀತಿಯ ಸಭೆಗಳನ್ನು ದೇಶದ ವಿವಿಧ ಭಾಗಗಳಲ್ಲೂ ಸಂಘಟಿಸುವುದಾಗಿ ಗ್ರೀನ್‌ಪೀಸ್ ಸಂಸ್ಥೆಯ ಗೋಪಿಕೃಷ್ಣ ತಿಳಿಸಿದರು.

**Notes to editor:**

(1) Union Finance Minister's budget speech can be accessed at http://indiabudget.nic.in/ub2009-10/bs/speecha.htm (Refer para. 34 in this page for his statement on fertilizer subsidies)

(2) PIB release dated 20 August 2009 on fertilizer subsidy reforms can be accessed at http://pib.nic.in/release/release.asp?relid=51987

(3) *Subsidising Food Crisis*, a Greenpeace India report launched on 1 July 2009 can be downloaded from: àhttp://www.green¸ïpeace.org/india/press/reports/subsidising-food-crisis

**For more information:**

**Gopikrishna SR**, Sustainable Agriculture Campaigner, Greenpeace India,
Mob: +91 9900897341; email: gkrishna@greenpeace.org

**P Srinivas**, Secretary, SOIL, Mob: +91 9945684306, email: vasu.shrinivas@rediffmail.com